ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು,

(Interruptions)

I appeal to the House; everyone should realise; I have a lot of difficulty in conducting. I will not extend it even for one minute ಇದು ಸಾಧ್ಯವಿಲ್ಲ, ಇದು ನನ್ನ ಮನಸ್ಸಿಗೆ ಒಪ್ಪುವುದಿಲ್ಲ. No, Question Hour is closed. There should be limit....

ಶ್ರೀ ಯು.ಆರ್. ಸಭಾಪತಿ : ಸರ್, ಉತ್ತರ ಕೊಡುವುದಕ್ಕೆ ಮಂತ್ರಿಗಳೇ ಇರಲಿಲ್ಲ.

ಅಧ್ಯಕ್ಷರು : ಅದಕ್ಕೆ ನಾನು ಕಾರಣನಲ್ಲ, ಎಲ್ಲರೂ ತಿಳಿದುಕೊಳ್ಳಬೇಕು, ಸದನದಲ್ಲಿ ಯಾವ್ಯಾವ ನಿಯಮ ಯಾವ್ಯಾವ ರೀತಿ ನಡೆಯಬೇಕೆನ್ನುವ ಜವಾಬ್ದಾರಿ ಪ್ರತಿಯೊಬ್ಬರಿಗೂ ಇರಬೇಕು. ಪ್ರಶ್ನೋತ್ತರವೇಳೆಗೂ ಇನ್ನೊಂದಕ್ಕೂ ವ್ಯತ್ಯಾಸವಿಲ್ಲದೆ ಗಂಟೆಗಟ್ಟಲೆ ಭಾಷಣಗಳನ್ನು ಮಾಡುತ್ತಾ ಹೋದರೆ ಸದನವನ್ನು ನಾನು ಹೇಗೆ ನಡೆಸಬೇಕು; It is an insult to the Chair if I cannot complete the questions within one hour. Am I here to swallow the insults for whose fault. I do not want to be proved an inefficient speaker ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ಪ್ರತಿಯೊಂದಕ್ಕೂ ಮಿತಿ ಇರಬೇಕು, ನಾವು ಮೂರು ವರ್ಷ ಕೇಳಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ನನ್ನ ಪ್ರಶ್ನೆಗೆ ಉತ್ತರ ಕೊಡಲು ಮಂತ್ರಿಗಳೇ ಇರಲಿಲ್ಲ; ನೀವೇ ಹೇಳಿದಿರಿ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗೆ ನಾನು ಮಾತುಕೊಟ್ಟಿದ್ದೇನೆ. ನಾಳೆ ತೆಗೆದುಕೊಳ್ಳುತ್ತೇನೆ, ನಿಮ್ಮಲ್ಲಿ ನೀವೇ ಹೀಗೆ ಏತಕ್ಕೆ ಆಯಿತೆಂದು ಡಿಬೇಟ್ ಮಾಡಿಕೊಳ್ಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ಲಿಖಿತಮೂಲಕ ಉತ್ತರಿಸುವ 27 ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 77 ಪ್ರಶ್ನೆಗಳ ಪೈಕಿ 45 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸಿದ್ದೇನೆ.

ಸೂಳ್ಯ ತಾಲ್ಲೂಕನ್ನು ಕಪ್ಪು ಹಾಗೂ ಬೂದು ಪ್ರದೇಶವೆಂದು ಘೋಷಿಸಿರುವುದರ ಕುರಿತು

1786 - ಶ್ರೀ ಎಸ್. ಅಂಗಾರ್ (ಸೂಳ್ಯ) : ಮಾನ್ಯ ಸಣ್ಣ ನೀರಾವರಿ ಮತ್ತು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸೂಳ್ಯ ತಾಲ್ಲೂಕನ್ನು ಕಪ್ಪು ಹಾಗೂ ಬೂದು ಪ್ರದೇಶವೆಂದು ಘೋಷಿಸಿರುವುದರಿಂದ ಅನೇಕ ಸಲ ರೈತರಿಗೆ ಸರ್ಕಾರದ ಸೌಲಭ್ಯ ಪಡೆಯಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಬಂದಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರವು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಭಾರತ ಸರ್ಕಾರದ ಅಂತರ್ಜಲ ಅಂದಾಜು ಸಮಿತಿಯು ನಿಗಧಿಪಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ಪ್ರದೇಶಗಳನ್ನು ಕಪ್ಪು, ಬೂದು ಅಥವಾ ಬಿಳಿ ಎಂದು ವರ್ಗೀಕರಿಸಲಾಗುವುದು. ಈ ಆಧಾರದ ಮೇಲೆ ರಾಜ್ಯ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸಮೀಕ್ಷೆಗಳನ್ನು ನಡೆಸಿ ಇಡೀ ರಾಜ್ಯದ ಅಂತರ್ಜಲ ಸ್ಥಿತಿಯ ಬಗ್ಗೆ1994ರಲ್ಲಿ ವರದಿಯನ್ನು ಪ್ರಕಟಿಸಿತ್ತು. ಈ ವರದಿಯನ್ನು ಆಧರಿಸಿ, ನಬಾರ್ಡ್ ಸಂಸ್ಥೆಯು ಸೂಳ್ಯ ತಾಲ್ಲೂಕನ್ನು ಕಪ್ಪು ಪ್ರದೇಶವೆಂದು ಘೋಷಿಸಿದೆ.

ರಾಜ್ಯ ಸರ್ಕಾರವು ಈಗ ಪುನರ್ ಸಮೀಕ್ಷೆ ಮಾಡಲು ಉದ್ದೇಶಿಸಿದೆ ಮತ್ತು ತದನಂತರ ನಬಾರ್ಡ್ ಸಂಸ್ಥೆಗೆ ಸೂಕ್ತ ಶಿಫಾರಸ್ಸನ್ನು ಕಳುಹಿಸಲಾಗುವುದು.

ಚಕ್ರ, ವರಾಹಿ ಯೋಜನಾ ಪ್ರದೇಶದಲ್ಲಿ ಜಮೀನು ಮನೆ ಕಳೆದು ಕೊಂಡವರಿಗೆ ವಿದ್ಯುತ್ ನಿಗಮದಿಂದ ಪರಿಹಾರ

1787 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಕ್ರಾ-ವರಾಹಿ ಯೋಜನಾ ಪ್ರದೇಶದಲ್ಲಿ ಜಮೀನು ಮನೆ ಕಳೆದುಕೊಂಡ ರೈತರಿಗೆ ನೀಡಬೇಕಾದ ಪರಿಹಾರ ಧನ ಎಷ್ಟು ಬಾಕಿಯಿದೆ;

ಆ) ಕೋರ್ಟ್ ಮೊಕದ್ದಮೆಯಲ್ಲಿ ಡಿಕ್ರಿ ಪಡೆದಿರುವ ಪ್ರಕರಣದಲ್ಲಿ ಕಟ್ಟಬೇಕಾದ ಹಣವೆಷ್ಟು; ಎಷ್ಟು ಸಮಯದಿಂದ ಬಾಕಿಯಿದೆ,

ಇ) ಶಿವಮೊಗ್ಗ ಭೂಸ್ವಾಧೀನ ಅಧಿಕಾರಿಗಳ ಕಛೇರಿಗೆ ವಿದ್ಯುತ್ ನಿಗಮದಿಂದ ಸಾಕಷ್ಟು ಬಾರಿ ಈ ಬಗ್ಗೆ ಕೇಳಿಕೊಂಡಿದ್ದರೂ ಹಣ ನೀಡಲು ವಿಳಂಬಕ್ಕೆ ಕಾರಣಗಳೇನು, ಯಾವಾಗ ಚುಕ್ತ ಮಾಡಲಾಗುವುದು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಚಕ್ರಾ-ವರಾಹಿ ಯೋಜನೆಯಡಿ ಹಾಲಿ ವಿವಿಧ ನ್ಯಾಯಾಲಯಗಳಲ್ಲಿರುವ ಭೂಸ್ವಾಧೀನಾತಿ ದಾವಾ ಪ್ರಕರಣಗಳ ಹೊರತಾಗಿ ಉಳಿದ ಎಲ್ಲಾ ಪ್ರಕರಣಗಳಿಗೆ ಪರಿಹಾರ ಧನ ಪಾವತಿ ಮಾಡಲಾಗಿದೆ. ಈ ರೀತಿ ವಿವಿಧ ನ್ಯಾಯಾಲಯಗಳಲ್ಲಿ ಹಾಲಿ 41 ಪ್ರಕರಣಗಳು ಇತ್ಯರ್ಥವಾಗಬೇಕಾಗಿದ್ದು ಇವುಗಳ ಬಾಬ್ತು ಪಾವತಿಸಬೇಕಾದ ಪರಿಹಾರ ಮೊತ್ತವು ನ್ಯಾಯಾಲಯಗಳ ತೀರ್ಪಿನ ಮೇಲೆ ಅವಲಂಬಿತವಾಗಿದೆ. ಆದಾಗ್ಯೂ, ಅನಧಿಕೃತ ಅಧಿಕೃತ ಕಟ್ಟಡಗಳಿಗೆ, ಅನಧಿಕೃತ ಜಮೀನು ಹಾಗೂ ದಾವಾ ಪ್ರಕರಣಗಳಿಗಾಗಿ ಅಂದಾಜು 200.00 ಲಕ್ಷ ರೂ.ಗಳ ಪರಿಹಾರ ಧನ ನೀಡಬೇಕಾಗಿದೆ.